# ಸುರತ್ಕಲ್ ಎನ್ಐಟಿಕೆಯಲ್ಲಿ ಸುಸ್ಥಿರ ಕೃಷಿ ಭವಿಷ್ಯ: ವಿಚಾರ ಸಂಕಿರಣ



**ಸುರತ್ಕಲ್, ಫೆ. 3:** ಎನ್ಐಟಿಕೆ ಸುರತ್ಕಲ್ ಸ್ಕೂಲ್ ಆಫ್ ಹ್ಯುಮಾನಿಟೀಸ್, ಸೋಶಿಯಲ್ ಸೈನ್ಸಸ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ಸುಸ್ಥಿರ ಕೃಷಿ ಭವಿಷ್ಯ ಎಂಬ ವಿಚಾರ ಸಂಕಿರಣ ನಡೆಯಿತು.

ನೀತಿ ಆಯೋಗದ ಆರ್ಥಿಕ ಕೋಶದ ನಿರ್ದೇಶಕ ಅಮಿತ್ ವರ್ಮಾ ಉದ್ಘಾಟಿಸಿ, ಪರಿಸರ ವ್ಯವಸ್ಥೆಯನ್ನು ಬಲಪಡಿಸುವ, ರೈತರಲ್ಲಿ ಸುಸ್ಥಿರ ಕೃಷಿ ಪದ್ಧತಿಗಳನ್ನು ಪ್ರೋತ್ಸಾಹಿಸುವ ಮೂಲಕ ಹೆಚ್ಚಿನ ಉತ್ಪಾದನೆಗೆ ಆದ್ಯತೆ ನೀಡಬೇಕಿದೆ ಎಂದರು.

ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಚನ್ನಪ್ಪ ಅಂಗಡಿ, ಎಸೆಕ್ಸ್ ವಿಶ್ವವಿದ್ಯಾಲಯದ ಪ್ರೊ| ನೀರಜ್ ಕುಮಾರ್ ಸುಸ್ಥಿರ ಕೃಷಿ ಕುರಿತಾಗಿ ಮಾಹಿತಿ ನೀಡಿದರು. ಎನ್ಐಟಿಕೆ ಸುರತ್ಕಲ್‌ನ ರಿಸರ್ಚ್ ಅಂಡ್ ಕನ್ಸಲ್ಟೆನ್ಸಿ ಡೀನ್ ಪ್ರೊ| ಉದಯ್ ಭಟ್ ಕೆ. ಅಧ್ಯಕ್ಷತೆ ವಹಿಸಿದ್ದರು. ಎನ್ಐಟಿಕೆ ಸುರತ್ಕಲ್‌ನ ಪ್ರೊ| ರಿತಾಂಜಲಿ ಮಾಝಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

Udayavani, Date: 04/02/25: p, 03